ಶಿವಮೊಗ್ಗ,ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,
ಮಾಚೇನಹಳ್ಳಿ, ನಿದಿಗೆ(ಅಂಚೆ), ಶಿವಮೊಗ್ಗ– 577 222, ☎ 08182–246165 www.shimul.coop

ಐ.ಎಫ್.ಟಿ. ಸಂಖ್ಯೆ/ಶಿದಾಚಿಸಹಾಒ/ಮಾರುಕಟ್ಟೆ/ಕ್ಷೀರಭಾಗ್ಯ/ಟೆಂಡರ್/2344/2017–18 ದಿನಾಂಕ: 19.06.2017

**–: ಸಾರಿಗೆ ವಾಹನಗಳನ್ನು ಒಂದು ವರ್ಷದ ಅವಧಿಗೆ ಗುತ್ತಿಗೆ ಆಧಾರದಲ್ಲಿ ಒದಗಿಸಲು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಪ್ರಕಟಣೆ :–**

"ಕ್ಷೀರಭಾಗ್ಯ" ಯೋಜನೆಯಡಿ ಶಿವಮೊಗ್ಗ ಹಾಲು ಒಕ್ಕೂಟದ ವ್ಯಾಪ್ತಿಯಲ್ಲಿ ಬರುವ ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳ ಎಲ್ಲಾ ತಾಲ್ಲೂಕುಗಳಿಗೆ ಮದರ್‌ಡೈರಿ ಬೆಂಗಳೂರು, ಧಾರವಾಡ ಪ್ಯಾಕಿಂಗ್ ಕೇಂದ್ರಗಳಿಂದ ಖಾಸಗಿ ಗುತ್ತಿಗೆದಾರರ ಗೋದಾಮುಗಳಿಗೆ ಹಾಗೂ ಸಿ.ಡಿ.ಪಿ.ಓ ಕಚೇರಿ ಗೋದಾಮುಗಳಿಗೆ ಕೆನೆಭರಿತ ಹಾಲಿನ ಪುಡಿಯನ್ನು ಸಾಗಾಣಿಕೆ ಮಾಡಲು ಒಂದು ವರ್ಷದ ಅವಧಿಗೆ ಸಾಗಾಣಿಕೆ ಗುತ್ತಿಗೆ ಆಧಾರದ ಮೇಲೆ ವಾಹನ ವಾಹನ ಒದಗಿಸಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://eproc.karnataka.gov.in** ಮೂಲಕ (ಟೆಕ್ನಿಕಲ್/ಕಮರ್ಷಿಯಲ್) ಟೆಂಡರ್ ಕರೆಯಲಾಗಿದ್ದು ವಾಹನಗಳನ್ನು ಹೊಂದಿರುವ ಮಾಲಿಕರು/ಸಂಸ್ಥೆಗಳು ಅರ್ಜಿಯನ್ನು ಸಲ್ಲಿಸಬಹುದಾಗಿದೆ.

ಹಾಲಿನ ಪುಡಿ ಸಾಗಾಣಿಕೆ ವಿವರಗಳು.

ಪ್ಯಾಕಿಂಗ್ ಕೇಂದ್ರಗಳಿಂದ ಈ ಕೆಳಗೆ ನಮೂದಿಸಿರುವ ಮೂರು ಜಿಲ್ಲೆಯ ವ್ಯಾಪ್ತಿಯ ಎಲ್ಲಾ ತಾಲ್ಲೂಕು ಕೇಂದ್ರಗಳಿಗೆ / ಸಿ.ಡಿ.ಪಿ.ಓ ಕಚೇರಿ ಗೋದಾಮುಗಳಿಗೆ ಸುರಕ್ಷಿತ ಕವಚವುಳ್ಳ ವಾಹನಗಳ ಮುಖಾಂತರ ಹಾಲಿನ ಪುಡಿ ಸರಬರಾಜು ಮಾಡಬೇಕಾದ ವಿವರಗಳು :–

| ಕ್ರ.ಸಂ | ಪ್ಯಾಕಿಂಗ್ ಕೇಂದ್ರಗಳು ಇರುವ ಸ್ಥಳ | ಹಾಲಿನ ಪುಡಿ ಸಾಗಾಣಿಕೆ ಮಾಡಬೇಕಾದ ತಾಲ್ಲೂಕುಗಳ ಹೆಸರು | ಮಾಹೆಯಾನ ಅಂದಾಜು ಹಾಲಿನ ಪುಡಿಯ ಸಾಗಾಣಿಕೆ ಪರಿಮಾಣ (ಕೆ.ಜಿ.ಗಳಲ್ಲಿ) | ಇ.ಎಂ.ಡಿ. ರೂ. | ಭದ್ರತಾ ಠೇವಣಿ ರೂ. |
|---|---|---|---|---|---|
| 1 | ಮದರ್ ಡೈರಿ, ಬೆಂಗಳೂರು | ಚಿತ್ರದುರ್ಗ ಜಿಲ್ಲೆಯ ಎಲ್ಲಾ ತಾಲ್ಲೂಕು ಕೇಂದ್ರಗಳಿಗೆ | 90,000 | 10,000/– | 75,000/– |
| 2 | ಎಸೆನ್ಸಿಯಲ್ ಫಾರ್ಮ್, ಧಾರವಾಡ | ಶಿವಮೊಗ್ಗ, ದಾವಣಗೆರೆ ಜಿಲ್ಲೆಯ ಎಲ್ಲಾ ತಾಲ್ಲೂಕು ಕೇಂದ್ರಗಳಿಗೆ | 1,90,000 | 15,000/– | 1,50,000/– |

ಶಿವಮೊಗ್ಗ ಜಿಲ್ಲೆಯ ತಾಲ್ಲೂಕುಗಳು :– ಶಿವಮೊಗ್ಗ, ಭದ್ರಾವತಿ, ಸಾಗರ, ಶಿಕಾರಿಪುರ,ಸೊರಬ,ಹೊಸನಗರ, ತೀರ್ಥಹಳ್ಳಿ.
ದಾವಣಗೆರೆ ಜಿಲ್ಲೆಯ ತಾಲ್ಲೂಕುಗಳು :– ದಾವಣಗೆರೆ, ಹರಿಹರ, ಹೊನ್ನಾಳಿ, ಚನ್ನಗಿರಿ, ಹರಪನಹಳ್ಳಿ, ಜಗಳೂರು.
ಚಿತ್ರದುರ್ಗ ಜಿಲ್ಲೆಯ ತಾಲ್ಲೂಕುಗಳು :– ಚಿತ್ರದುರ್ಗ,ಚಳ್ಳಕೆರೆ,ಹಿರಿಯೂರು,ಮೊಳಕಾಲ್ಮೂರು, ಹೊಳಲ್ಕೆರೆ, ಹೊಸದುರ್ಗ.

| | | |
|---|---|---|
| 1 | ಟೆಂಡರ್ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ | ದಿನಾಂಕ: 28.06.2017 ರಿಂದ |
| 2 | ಟೆಂಡರ್ ಫಾರಂಗಳನ್ನು ಇ–ಟೆಂಡರ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ | ದಿನಾಂಕ: 24.07.2017 ರಂದು ಸಂಜೆ: 17.30ಗಂಟೆಯವರೆಗೆ |
| 3 | ಟೆಕ್ನಿಕಲ್ ಟೆಂಡರ್ ತೆರೆಯುವ ದಿನ | ದಿನಾಂಕ: 27.07.2017 ರಂದು ಬೆಳಿಗ್ಗೆ: 11.30 ಗಂಟೆಗೆ |
| 4 | ಕಮರ್ಷಿಯಲ್ ಟೆಂಡರ್‌ಗಳನ್ನು ತೆರೆಯುವ ದಿನ | ದಿನಾಂಕ: 31.07.2017 ರಂದು ಬೆಳಿಗ್ಗೆ: 11.30 ಗಂಟೆಗೆ |

**ಕ್ಷೀರ ಭಾಗ್ಯ ಯೋಜನೆಯಡಿ ಪ್ಯಾಕಿಂಗ್ ಕೇಂದ್ರಗಳಿಂದ ತಾಲ್ಲೂಕು ಕೇಂದ್ರಗಳಿಗೆ ಹಾಲಿನ ಪುಡಿ ಸರಬರಾಜು ಮಾಡಲು ಸಾರಿಗೆ ವಾಹನ ಒದಗಿಸಲು ಷರತ್ತು ಮತ್ತು ನಿಬಂಧನೆಗಳು :–**

1. ಯಶಸ್ವಿ ಟೆಂಡರ್‌ದಾರರು ಬೆಂಗಳೂರು, ಧಾರಾವಾಡದ ಕಹಾಮ ನಿಗದಿಪಡಿಸಿದ ಪ್ಯಾಕಿಂಗ್ ಕೇಂದ್ರಗಳಿಂದ ಕೆನೆಭರಿತ ಹಾಲಿನ ಪುಡಿಯನ್ನು ಎತ್ತುವಳಿ ಮಾಡಿ ಆಯ್ಕೆಯಾದ ವಿಭಾಗಗಳ ತಾಲ್ಲೂಕುಗಳಲ್ಲಿನ ಸರ್ಕಾರಿ ಗೋದಾಮುಗಳಿಗೆ / ಖಾಸಗಿ ಗುತ್ತಿಗೆ ಗೋದಾಮುಗಳಿಗೆ / ಎಲ್ಲಾ ತಾಲ್ಲೂಕು ಶಿಶು ಅಭಿವೃದ್ದಿ ಯೋಜನಾಧಿಕಾರಿಗಳ ಕಛೇರಿ ಗೋದಾಮುಗಳಿಗೆ ಸಾಗಾಣಿಕೆ ಮಾಡುವುದು.

ಮುಂದುವರೆದಿದೆ...

2. ಹಾಲಿನ ಪುಡಿ ಪ್ರಮಾಣದಲ್ಲಿ ಸಿ.ಡಿ.ಪಿ.ಓ ಕಚೇರಿ / ಶಾಲೆಗಳ ಬೇಡಿಕೆಗಳಿಗನುಸಾರ ಕಾಲ ಕಾಲಕ್ಕೆ ಬದಲಾವಣೆಗೆ ಒಳಪಟ್ಟಿರುತ್ತದೆ.
3. ಟೆಂಡರ್‌ದಾರರು ಮದರ್‌ಡೈರಿ ಬೆಂಗಳೂರು ಪ್ಯಾಕಿಂಗ್ ಕೇಂದ್ರಗಳಿಂದ ತಾಲ್ಲೂಕು ಕೇಂದ್ರಗಳಿಗೆ ಹಾಲಿನ ಪುಡಿ ಸರಬರಾಜು ಮಾಡಲು ಕನಿಷ್ಠ 6 ಟನ್ ಸಾಮರ್ಥ್ಯದ 1 ವಾಹನ ಹೊಂದಿರಬೇಕು ಹಾಗೂ ಧಾರವಾಡ ಪ್ಯಾಕಿಂಗ್ ಕೇಂದ್ರಗಳಿಂದ ತಾಲ್ಲೂಕು ಕೇಂದ್ರಗಳಿಗೆ ಹಾಲಿನ ಪುಡಿ ಸರಬರಾಜು ಮಾಡಲು ಕನಿಷ್ಠ 6 ಟನ್ ಸಾಮರ್ಥ್ಯದ 2 ವಾಹನ ಹೊಂದಿರಬೇಕು. ಸದರಿ ವಾಹನಗಳ ದಾಖಲಾತಿಯನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡತಕ್ಕದ್ದು.
4. ಅರ್ಜಿದಾರರು ಪ್ಯಾಕಿಂಗ್ ಕೇಂದ್ರಗಳಿಂದ ತಾಲ್ಲೂಕು ಕೇಂದ್ರಗಳಿಗೆ ಹಾಲಿನ ಪುಡಿ ಸರಬರಾಜು ಮಾಡಲು 3 ಟನ್‌ವರೆಗೆ, 3 ರಿಂದ 6 ಟನ್‌ವರೆಗೆ, 6 ರಿಂದ 10 ಟನ್‌ವರೆಗೆ ಹಾಗೂ 10 ಟನ್ ಮೇಲ್ಪಟ್ಟು ಪ್ರತಿ ಟನ್‌ಗೆ ಸಾಗಾಣಿಕೆ ದರವನ್ನು ನಮೂದಿಸತಕ್ಕದ್ದು.
5. ಕೆನೆಭರಿತ ಹಾಲಿನ ಪುಡಿಯನ್ನು 500 ಗ್ರಾಂ ಪ್ಯಾಕ್ ಹಾಗೂ 1 ಕೆ.ಜಿ ಪ್ಯಾಕ್‌ನ 25/20 ಕೆ.ಜಿ ಚೀಲಗಳಲ್ಲಿ ಎತ್ತುವಳಿ ಮಾಡಬೇಕಾಗಿರುತ್ತದೆ.
6. ಕೆಲವೊಮ್ಮೆ ತಾಲ್ಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳವರ ಕಚೇರಿಯಿಂದ / ಜಿಲ್ಲಾ ಪಂಚಾಯತ್ ಅಕ್ಷರ ದಾಸೋಹ ಇಲಾಖೆಯವರಿಂದ ಬರುವ ಬೇಡಿಕೆ ಪ್ರಕಾರ 2 ತಿಂಗಳ ಬೇಡಿಕೆ ಕೆನೆಭರಿತ ಹಾಲಿನ ಪುಡಿಯನ್ನು ಒಂದೇ ತಿಂಗಳಲ್ಲಿ ಸಂಬಂಧಪಟ್ಟ ತಾಲ್ಲೂಕು ಕೇಂದ್ರಗಳಿಗೆ ಸಾಗಾಣಿಕೆ ಮಾಡಬೇಕಾಗಿರುವುದರಿಂದ ಎತ್ತುವಳಿ ಪ್ರಮಾಣದಲ್ಲಿ ವ್ಯತ್ಯಾಸವಾಗುವ ಸಾಧ್ಯತೆ ಇರುತ್ತದೆ.
7. ಹಾಲಿನ ಪುಡಿ ಪ್ಯಾಕಿಂಗ್ ಕೇಂದ್ರಗಳಿಂದ ನಿಗದಿತ ದಿನಾಂಕದಂದು ಹಾಲಿನ ಪುಡಿ ಲೋಡ್ ಸಿಗದೇ ಇರುವ ಸಂದರ್ಭಗಳಲ್ಲಿ ಖಾಲಿ ವಾಹನ ಲೋಡಿಂಗ್ ಆಗಬೇಕಾಗಿರುವ ಸ್ಥಳದಲ್ಲೇ ಕಾಯಬೇಕಾಗಿದ್ದು, ಇದಕ್ಕೆ ಹೆಚ್ಚುವರಿ ಮೊತ್ತ ಪಾವತಿಸಲು ಅವಕಾಶವಿರುವುದಿಲ್ಲ.
8. ಒಕ್ಕೂಟದ ಆಯಾ ಜಿಲ್ಲಾ ಹಾಗೂ ತಾಲ್ಲೂಕು ನೋಡಲ್ ಅಧಿಕಾರಿಗಳು ಕಾಲಕಾಲಕ್ಕೆ ಸೂಚಿಸುವ ಸಮಯಕ್ಕೆ ವಾಹನವನ್ನು ಒದಗಿಸುವುದು ಹಾಗೂ ಸೂಚಿಸುವ ಸ್ಥಳಕ್ಕೆ / ತಾಲ್ಲೂಕುಗಳಿಗೆ ಸಕಾಲಕ್ಕೆ ಹಾಲಿನ ಪುಡಿಯನ್ನು ಸಾಗಾಣಿಕೆ ಮಾಡುವುದು ವಾಹನ ಗುತ್ತಿಗೆದಾರರ ಜವಾಬ್ದಾರಿಯಾಗಿರುತ್ತದೆ.
9. ಹಾಲಿನ ಪುಡಿಯನ್ನು ಪ್ಯಾಕಿಂಗ್ ಕೇಂದ್ರಗಳಿಂದ ಪಡೆದು ಸುರಕ್ಷಿತವಾಗಿ ಒಕ್ಕೂಟದಿಂದ ಸೂಚಿಸುವ ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳಿಗೆ ಸರಬರಾಜು ಮಾಡುವುದು. ಈ ಸಂಬಂಧ ಡ್ಯಾಮೇಜ್ ಅಥವಾ ಇನ್ನಾವುದೇ ದೂರುಗಳು ಬಂದಲ್ಲಿ ಅದಕ್ಕೆ ಸಾಗಾಣಿಕೆ ಗುತ್ತಿಗೆದಾರರೇ ಜವಾಬ್ದಾರರಾಗಿರುತ್ತಾರೆ ಹಾಗೂ ಸದರಿ ನಷ್ಟದ ಮೊತ್ತವನ್ನು ಗುತ್ತಿಗೆದಾರರ ಸಾಗಾಣಿಕೆ ಬಿಲ್ಲಿನಲ್ಲಿ ಕಠಾಯಿಸಲಾಗುವುದು.
10. ಕೆನೆಭರಿತ ಹಾಲಿನ ಪುಡಿಯನ್ನು ಪ್ಯಾಕಿಂಗ್ ಕೇಂದ್ರಗಳಿಂದ ಸೂಚಿಸುವ ಜಿಲ್ಲಾ/ತಾಲ್ಲೂಕು ಗೋದಾಮುಗಳಿಗೆ / ಸಿ.ಡಿ.ಪಿ.ಓ ಕಚೇರಿ ಗೋದಾಮುಗಳಿಗೆ / ಖಾಸಗಿ ಗುತ್ತಿಗೆದಾರರ ಗೋದಾಮುಗಳಿಗೆ ತಲುಪಿಸಿ ಇಲಾಖೆಯ ಡೆಸಿಗ್ನೇಟೆಡ್ ಅಧಿಕಾರಿಗಳಿಂದ / ಗುತ್ತಿಗೆದಾರರಿಂದ ತಪ್ಪದೆ ಸಹಿ ಹಾಗೂ ಮೊಹರು ಹೊಂದಿರುವ ಸ್ವೀಕೃತಿಯನ್ನು ಪಡೆದು ಅದನ್ನು ಒಕ್ಕೂಟಕ್ಕೆ ಸಲ್ಲಿಸಬೇಕಾಗಿರುತ್ತದೆ.
11. ಲೋಡ್‌ನಲ್ಲಿ 2 ಅಥವಾ ಅದಕ್ಕಿಂತ ಹೆಚ್ಚಿನ ತಾಲ್ಲೂಕು ಕೇಂದ್ರಗಳಿಗೆ ಹಾಲಿನ ಪುಡಿ ಸಾಗಾಣಿಕೆ ಮಾಡಬೇಕಾದಲ್ಲಿ ಹೆಚ್ಚಿನ ಅಂತರವಿರುವ ಕೇಂದ್ರದ ಬಾಡಿಗೆಯನ್ನು ಮಾತ್ರ ಸಾಗಾಣಿಕೆ ಬಿಲ್ ಪಾವತಿಗೆ ಪರಿಗಣಿಸಲಾಗುವುದು.
12. ಹಾಲಿನ ಪುಡಿ ಸಾಗಾಣಿಕೆ ಮಾಡುವ ಸಮಯದಲ್ಲಿ ವಾಹನದ ಜೊತೆಗೆ ಅಗತ್ಯ ದಾಖಲೆ / ಮಾಹಿತಿಯನ್ನು ಕಳುಹಿಸುವಂತೆ ಕ್ರಮವಿಡುವುದು ತಪ್ಪಿದಲ್ಲಿ ಇದರಿಂದಾಗುವ ತೊಂದರೆಗಳಿಗೆ ಸಾಗಾಣಿಕೆ ಗುತ್ತಿಗೆದಾರರೆ ಜವಾಬ್ದಾರರಾಗಿರುತ್ತಾರೆ.
13. ಡೀಸೆಲ್ ದರವು ಹೆಚ್ಚು ಅಥವಾ ಕಡಿಮೆಯಾದಲ್ಲಿ ಸಾಗಾಣಿಕೆ ದರ ಪರಿಷ್ಕರಿಸಲಾಗುವುದಿಲ್ಲ.
14. ನಿಗದಿತ ಅವಧಿಯಲ್ಲಿ ಜಿಲ್ಲಾ/ತಾಲ್ಲೂಕು ಗೋದಾಮುಗಳಿಗೆ/ಅಂಗನವಾಡಿ/ಖಾಸಗಿ ಗುತ್ತಿಗೆದಾರರ ಗೋದಾಮುಗಳಿಗೆ ಹಾಲಿನ ಪುಡಿ ಸರಬರಾಜು ಆಗದೆ ವಾಹನ ಗುತ್ತಿಗೆದಾರರಿಂದ / ವಾಹನಗಳ ತೊಂದರೆಯಿಂದ ವಿಳಂಬವಾದಲ್ಲಿ ಒಕ್ಕೂಟದ ವತಿಯಿಂದ ಸೂಕ್ತ ದಂಡ ವಿಧಿಸಲಾಗುವುದು ಹಾಗೂ ದಂಡದ ಮೊತ್ತವನ್ನು ಗುತ್ತಿಗೆದಾರರ ಸಾಗಾಣಿಕೆ ಬಿಲ್ಲಿನಲ್ಲಿ ಕಠಾಯಿಸಿಕೊಳ್ಳಲಾಗುವುದು.

ಮುಂದುವರೆದಿದೆ...

15. ಪ್ರತಿ ತಿಂಗಳು 3ನೇ ತಾರೀಖಿನೊಳಗೆ ಗುತ್ತಿಗೆದಾರರು ಸಾಗಾಣಿಕೆ ವೆಚ್ಚದ ಬಿಲ್ಲನ್ನು ಒಕ್ಕೂಟಕ್ಕೆ ಸಲ್ಲಿಸುವುದು ಹಾಗೂ ಸಾಗಾಣಿಕೆ ಬಿಲ್ಲಿನಲ್ಲಿ ಪಾನ್ ಸಂಖ್ಯೆ ಮತ್ತು ಬ್ಯಾಂಕ್ ಖಾತೆ ಸಂಖ್ಯೆ ನಮೂದಿಸತಕ್ಕದ್ದು.
16. ಹಾಲಿನ ಪುಡಿ ಸಾಗಾಣಿಕೆ ಗುತ್ತಿಗೆಗೆ ಸಂಬಂಧಿಸಿದಂತೆ ಯಾವುದೇ ದಂಡ/ಕಟಾವಣೆಗಳನ್ನು ಗುತ್ತಿಗೆದಾರರ ಸಾಗಾಣಿಕೆ ಬಿಲ್ ಅಥವಾ ಸದರಿಯವರು ಒಕ್ಕೂಟದಲ್ಲಿ ತೊಡಗಿಸಿರುವ ಭದ್ರತಾ ಠೇವಣಿಯಿಂದ ಕಟಾಯಿಸಿಕೊಳ್ಳಲಾಗುವುದು.
17. ಹಾಲಿನ ಪುಡಿ ಸರಬರಾಜು ವೇಳೆಯಲ್ಲಿ ಹಾಲಿನ ಪುಡಿ ಪ್ಯಾಕೇಟ್ / ಚೀಲಗಳಲ್ಲಿ ಯಾವುದೇ ಷಾರ್ಟೇಜ್ / ಡ್ಯಾಮೇಜು ಆದಲ್ಲಿ ಅದಕ್ಕೆ ಸಾಗಾಣಿಕೆ ಗುತ್ತಿಗೆದಾರರು ಜವಾಬ್ದಾರರಾಗಿರುತ್ತಾರೆ ಹಾಗೂ ಅದರ ಮೊತ್ತವನ್ನು ಗುತ್ತಿಗೆದಾರರ ಬಿಲ್ಲಿನಲ್ಲಿ ಕಟಾಯಿಸಿಕೊಳ್ಳಲಾಗುವುದು.
18. ಟೆಂಡರ್‌ನಲ್ಲಿ ನಿಗದಿಯಾಗುವ ಸಾಗಾಣಿಕೆ ದರವು ಲೋಡಿಂಗ್ ಮತ್ತು ಅನ್ ಲೋಡಿಂಗ್ ವೆಚ್ಚ ಹಾಗೂ ಅನ್ವಯಿಸುವ ಎಲ್ಲಾ ತೆರಿಗೆಗಳು ಸೇರುತ್ತವೆ.

**ಯಾವುದೇ ಕಾರಣ ನೀಡದೆ ಟೆಂಡರನ್ನು ಅಂಗಿಕರಿಸುವ/ತಿರಸ್ಕರಿಸುವ ಹಕ್ಕನ್ನು ವ್ಯವಸ್ಥಾಪಕ ನಿರ್ದೇಶಕರು ಹೊಂದಿರುತ್ತಾರೆ. ವ್ಯವಸ್ಥಾಪಕ ನಿರ್ದೇಶಕರ ತೀರ್ಮಾನವೇ ಅಂತಿಮವಾದುದು.**

ಹೆಚ್ಚಿನ ಮಾಹಿತಿಯನ್ನು ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಹಾಲು ಒಕ್ಕೂಟದ ಕಛೇರಿ ವೇಳೆಯಲ್ಲಿ/ ಮಾರುಕಟ್ಟೆ ವಿಭಾಗದಿಂದ ಪಡೆಯಬಹುದು. **ದೂರವಾಣಿ : (08182) 246344. ಮತ್ತು** ಒಕ್ಕೂಟದ ವೆಬ್‌ಸೈಟ್ **www.shimul.coop** ಸಂಪರ್ಕಿಸಬಹುದು.

ಸಹಿ/-

ವ್ಯವಸ್ಥಾಪಕ ನಿರ್ದೇಶಕರು
ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ
ಸಹಕಾರ ಹಾಲು ಒಕ್ಕೂಟ, ನಿ.,

ದಿನಾಂಕ 19.06.2017
ಸ್ಥಳ : ಶಿವಮೊಗ್ಗ ಡೈರಿ